**ಎಂ.ವಿ.ಸಿ. ನಂ. 265 / 2023**
**ಆರ್. ಡಬ್ಲ್ಯೂ. 1.**

**ದಿನಾಂಕಃ 14-11-2025**
ಸಾಕ್ಷಿಗೆ ಪ್ರತಿಜ್ಞಾವಿಧಿ ಬೋಧಿಸಲಾಯಿತು.

**ಮಧ್ಯಂತರ ಅರ್ಜಿಯಲ್ಲಿ ಆದ ಆದೇಶದ ಮೇರೆಗೆ**

**ಮುಖ್ಯ ವಿಚಾರಣೆಃ 2 ನೇ ಎದುರುದಾರ ಪರಃ ವಕೀಲರಾದಃ ಶ್ರೀ. ಟಿ. ಜಿ. ಕೆ ರವರಿಂದ ಃ**

ಈ ಅರ್ಜಿಯಲ್ಲಿ ನಾನು 2 ನೇ ಎದುರುದಾರನಾಗಿದ್ದು, ಇಂದು ನನ್ನ ಮೌಖಿಕ ಸಾಕ್ಷ್ಯದ ಬದಲು ಈ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿ ಮತ್ತು ನಿಜ ಇರುತ್ತದೆ. ಅವುಗಳನ್ನು ತಿಳಿದುಕೊಂಡು ನಾನು ಸಹಿ ಮಾಡಿರುತ್ತೇನೆ.

ಈ ಕೆಳಗಿನ ದಾಖಲೆಗಳನು ಹಾಜರುಪಡಿಸಿರುತ್ತೇನೆ.

1. ಅಧಿಕಾರ ಪತ್ರ ಹಾಜರುಪಡಿಸಿದ್ದು ಅದನ್ನು ನಿಆರ್ 1 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿಯನ್ನು ವಜಾಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಾದ ಶ್ರೀ.ಎಸ್.ಬಿ. ರವರಿಂದಃ**

ಈ ಪ್ರಕರಣದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ. ದಿನಾಂಕ 21.05.2023 ರ ಮದ್ಯಾಹ್ನ 4.30 ಗಂಟೆಗೆ ಅಪಘಾತ ಆಗಿತ್ತು ಎಂದು ನನಗೆ ಗೊತ್ತಿರುತ್ತದೆ. ಸದರಿ ಅಪಘಾತದಿಂದ ಅರ್ಜಿದಾರನಿಗೆ ತೀವ್ರ ಸ್ವರೂಪದ ಗಾಯಗಳು ಆಗಿದ್ದವು ಎಂದು ನನಗೆ ಗೊತ್ತಿರುತ್ತದೆ. ನಮ್ಮ ಕಂಪನಿಯಿಂದ ಪ್ರಕರಣಗಳನ್ನು ತನಿಖೆ ಮಾಡಲು ನೇಮಕ ಮಾಡಿರುತೇವೆಂದರೆ ಸರಿ . ಈ ಪ್ರಕರಣದಲ್ಲಿ ತನಿಖೆ ಮಾಡಿರುತ್ತೇವೆ ಎಂದರೆ ಸರಿ. 2 ನೇ ಎದುರುದಾರನು 1 ನೇ ಎದುರುದಾರನ ಕಡೆಯಿಂದ ಆತನ ವಾಹನಕ್ಕೆ ಸಂಬಂದಪಟ್ಟ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿರುತಾರೆ ಎಂದರೆ ಸಾಕ್ಷಿಯು ಕೇವಲ ಪೋಲಿಸ್ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ ಎಂದು ಹೇಳುತ್ತಾರೆ. ಕೇವಲ ಪೋಲಿಸ್ ದಾಖಲಾತಿಗಳನ್ನು ಪಡೆದುಕೊಂಡಿರುತ್ತೇವೆ ಎಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ನಮ್ಮ ಕಂಪನಿ ಕಡೆಯಿಂದ ತನಿಖೆ ಮಾಡಿದ ವರದಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಒಂದು ವೇಳೆ ಸದರಿ ತನಿಖೆಯ ವರದಿಯನ್ನು

ಹಾಜರುಪಡಿಸಿದರೆ ಅರ್ಜಿದಾರರಿಗೆ ಹಣ ನೀಡಬೇಕಾಗುತ್ತದೆ ಅನ್ನುವ ಉದ್ದೇಶದಿಂದ ಸದರಿ ತನಿಖೆಯ ವರದಿಯನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರನು ಆತನ ವಾಹನ ವಿಮೆಯ ಷರತ್ತುಗಳನ್ನು ಉಲ್ಲಂಘನೆ ಮಾಡಿರುತ್ತಾನೆಂದು ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ಅರ್ಜಿದಾರನಿಗೆ ಅಪಘಾತ ಪರಿಹಾರವನ್ನು ನೀಡಬಾರದು ಎನ್ನುವ ಉದ್ದೇಶದಿಂದ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ಅಪಘಾತ ಆದ ದಿನದಂದು ನಮ್ಮ ಕಂಪನಿಯು 1 ನೇ ಎದುರುದಾರನ ವಾಹನವನ್ನು ವಿಮೆಗೆ ಒಳಪಡಿಸಿತ್ತು ಎಂದರೆ ಸರಿ . ಸದರಿ ವಾಹನ ವಿಮೆಯು ಸಂಪೂರ್ಣವಾಗಿ ಪರಿಹಾರವನ್ನು ನೀಡುವ ಹೊಣೆಗಾರಿಕೆಯನ್ನು ಹೊಂದಿತ್ತು ಎಂದರೆ ಸರಿ . ಅರ್ಜಿದಾರನು ವಾಹನ ವಿಮೆಯ ಸಂಪೂರ್ಣ ಪರಿಹಾರವನ್ನು ನೀಡುವ ಹೊಣೆಗಾರಿಕೆಯ 3 ನೇ ವ್ಯಕ್ತಿ ಆಗಿರುತ್ತಾನೆಂದರೆ ಸರಿ. ಅಂತಿಮ ವರದಿಯ ಪ್ರಕಾರ 1 ನೇ ಎದುರುದಾರನು ವಾಹನದ ಚಾಲಕ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ವರದಿಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಸಂಪೂರ್ಣ ತಪ್ಪು 1 ನೇ ಎದುರುದಾರನು ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ನನಗೆ ಗೊತ್ತಿದ್ದರು ಸಹಾ ಇಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ. ಅಂತಿಮ ವರದಿಯನ್ನು ನಾನು ಪ್ರಶ್ನಿಸಿರುವುದಿಲ್ಲ. 1 ನೇ ಎದುರುದಾರನು ವಾಹನದ ಚಾಲಕನ ತಪ್ಪಿನಿಂದ ಅಪಘಾತ ಆಗಿರುತ್ತದೆ ಎಂದು ಒಪ್ಪಿಕೊಂಡು ಆತನು ದಂಡವನ್ನು ತುಂಬಿ ಹೋಗಿರುತ್ತಾನೆಂದು ನನಗೆ ಗೊತ್ತಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೇನು ಗೂತ್ತಿರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಪರಿಹಾರ ನೀಡಬಾರದೆನ್ನುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ**

(ನನ್ನ ಉಕ್ತ ಲೇಖನದ ಮುಖಾಂತರ ಬೆರಳಚ್ಚುಗಾರಳಿಂದ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಯಾದಗಿರಿ